ತಯಾರಿಲ್ಲ. ಸಹಿ ಹಾಕಿದರೆ ನಿನ್ನ ಜೈಲಿಗೆ ಕಳಿಸ್ತಾರೆ ಅಂತ ಯಾರೋ ಅವನಿಗೆ ಹೇಳಿದ್ದಾರೆ ಅಂತ ಸುದ್ದಿ. ಆತ ನನ್ನ ಯಾವ ಮಾತನ್ನೂ ನಂಬುತ್ತಿಲ್ಲ.'

'ಬಾಕಿ ಎಷ್ಟಿದೆ?'

'ಅಸಲು ಒಂದು ಲಕ್ಷ. ಈಗ ಬಡ್ಡಿ ಸೇರಿ ಎರಡೂವರೆ ದಾಟಿದೆ...'

ಖೇದವೆನ್ನಿಸಿತು. ಬ್ಯಾಂಕಿಗೆ ಸೇರಿದಂದಿನಿಂದ ಪ್ರತಿ ಬಾರಿಯು ಮೊದಲ ಪ್ರಯತ್ನದಲ್ಲಿಯೇ ಪದೋನ್ನತಿ ಪಡೆಯುತ್ತ ಬಂದಿದ್ದ ರಾಗು ಬುದ್ಧಿವಂತ, ಪರಿಶ್ರಮಿ. ಮುಂದಿನ ವರ್ಷ ಮುಂದಿನ ಪದೋನ್ನತಿಗೆ ಸಿದ್ಧವಾಗುತ್ತಿರುವವನು. ಅವನಿಗೆ ಈ ಕಪ್ಪು ಚುಕ್ಕೆ... ಛೆ...

'ಕಾಲ ಬದಲಾಗಿದೆ ಭಾರ್ಗವ. ಪ್ರಾಮಾಣಿಕತೆ ಕಣ್ಮರೆಯಾಗಿದೆ. ಆದರೆ ಈ ಖಾತೆದಾರನ ಬಗ್ಗೆ ನನಗೆ ಮರುಕವಿದೆ. ಆತ ತನ್ನದಲ್ಲದ ತಪ್ಪಿಗೆ ಬಸವಳಿದಿದ್ದಾನೆ. ದೊಡ್ಡ ಹೊಟೇಲೆದುರು ಸೂಕ್ತ ಬಂಡವಾಳ ತೊಡಗಿಸಲಾಗದೆ, ವ್ಯಾಪಾರ ಇಳಿಮುಖವಾಗುತ್ತ ಹೋಯಿತು. ಬಾಡಿಗೆಯನ್ನೂ ಕೊಡಲಾಗದೆ ಮೊದಲಿದ್ದ ಹೊಟೇಲಿನ ಅರ್ಧ ಭಾಗವನ್ನ ಬಿಟ್ಟುಕೊಟ್ಟ. ಹೇಗೋ ಅಷ್ಟಿಷ್ಟು ಹಣ ಹೊಂದಿಸಿ ಒಂದಿಷ್ಟು ತುಂಬಿದ್ದಾನೆ ಬಹಳ ಹಿಂದೆ. ಈಗ ಊಟಕ್ಕೇ ತತ್ವಾರವಾಗಿರುವ ಸ್ಥಿತಿಯಲ್ಲಿದ್ದಾನೆ. ಪ್ರಾಮಾಣಿಕತೆ ಇದೆ, ತುಂಬುತ್ತೇನೆ ಅನ್ನುತ್ತಾನೆ. ಆದರೆ ಕಾನೂನು ಅದಕ್ಕೆ ಅವಕಾಶ ಕೊಡುವುದಿಲ್ಲವಲ್ಲ. ಎಷ್ಟು ಸಮಯ ಅಂತ ಕೊಡಕ್ಕಾಗುತ್ತೆ. ಬಡ್ಡಿ ಏರುತ್ತ ಹೋಗುತ್ತೆ ಅಷ್ಟೆ. ಸಮಯ ಕೊಡೋಣ ಸಹಿ ಹಾಕು ಎಂದರೂ ಅವನಿಗೆ ನಂಬುಗೆ ಬರುವುದಿಲ್ಲ...'

ಆತ ಹೊಟೇಲ್ ಬಿಸಿನೆಸ್ ಎಂದಾಗಲೇ ನನ್ನಲ್ಲೊಂದು ಶಂಕೆ ಮೈದಾಳಿ, ಅದನ್ನ ನಿಶ್ಚಿತಗೊಳಿಸಿಕೊಳ್ಳಲು ಆತ ತನ್ನ ಮಾತಿಗೆ ತುಸು ವಿರಾಮ ಕೊಡುತ್ತಿದ್ದಂತೆ ಕೇಳಿದೆ: 'ಯಾರು? ಯಾವ ಹೊಟೇಲು?'

'ವಿಜಯಲಕ್ಷ್ಮಿ ಹೊಟೇಲ್ ಅಂತ, ರಾಜ ರಸ್ತೆಯಲ್ಲಿದೆ. ಪ್ರೈಮ್ ಏರಿಯಾನೇ. ಆದರೆ ಇವತ್ತೋ ನಾಳೆಯೋ ಮುಚ್ಚುವ ಸ್ಥಿತಿಯಲ್ಲಿದೆ.'

★★★

ಮುನ್ನಾದಿನ ನಿದ್ದೆಗೆಟ್ಟರೂ ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ. ಎರಡು ವರ್ಷಗಳ ಕಾಲ ರಾಮಣ್ಣನೊಟ್ಟಿಗೆ ಆಡಿ ಬೆಳೆದ ನೆನಪುಗಳು ದಾಂಗುಡಿಯಿಕ್ಕಿದವು. ಅವನಾಗಲಿ ಅವನ ಹೆಂಡತಿ... ಆಕೆಯ ಹೆಸರು ನೆನಪಿಗೆ ಬರಲಿಲ್ಲ, ಬಂದಾಗಿನಿಂದಲೂ ಅವಳನ್ನು ಅಕ್ಕ ಎಂದೇ ಕರೆಯುತ್ತಿದ್ದವ ನಾನು ತನ್ನನ್ನು ಎಷ್ಟು ಪ್ರೀತಿಯಿಂದ ಕಾಣುತ್ತಿದ್ದರು! ಅವರಿಗೊಬ್ಬ ಮಗನಾದ ಬಳಿಕವೂ ತನ್ನ ಮೇಲಿನ ಪ್ರೀತಿ ಕಡಿಮೆಯಾಗಲಿಲ್ಲ. ತನ್ನ ಮುಖ ನೋಡಿದ ಕೂಡಲೇ ಮತ್ತು ತನ್ನ ಮಾತಿನಿಂದಲೇ ತನ್ನನ್ನ ಹಾರ್ವರ ಹುಡುಗ ಎಂದು ಗುರುತಿಸಿದ್ದ ರಾಮಣ್ಣ ಮತ್ತೆಂದೂ ಮನೆಗೆ ಅಡುಗೆಗೆ ಮೀನು ತಂದಿರಲಿಲ್ಲ. ಮೀನು, ಮಾಂಸದ ಅಡುಗೆ ಮಾಡಕೂಡದು ಎಂದೇ ಅಕ್ಕನಿಗೂ ತಾಕೀತು ಮಾಡಿದ್ದ. ಆಗಾಗ್ಗೆ ನಿನ್ನ ಊರು, ಅಪ್ಪ ಅಮ್ಮ ಯಾರು ಎನ್ನುವುದು ನೆನಪಾಯಿತೇನು ಭಾರ್ಗು ಎಂದು ಕೇಳುತ್ತಿದ್ದ. ತನಗೆ ನಂದಳಿಕೆಯ ನೆನಪಾಗುತ್ತಿದ್ದರೂ ಜೊತೆ ಜೊತೆಗೇ ಧುಮ್ಮಿಕ್ಕುವ ಮಲ್ಲಾರಿ ಮೇಷ್ಟ್ರ ರಕ್ಕಸ ಮೋರೆ ಅಡ್ಡ ಬಂದು ತಲೆಯಾಡಿಸುತ್ತಿದ್ದೆ. ಹೋಗಲಿ ಬಿಡಪ್ಪ, ನಮ್ಮ ಮಗನಾಗೇ ಇದ್ದುಬಿಡು ಎಂದು ತಲೆ ನೇವರಿಸುತ್ತಿದ್ದ. ಒಂದು ದಿನ ಇದ್ದಕ್ಕಿದಂತೆ ಈ ವಯಸ್ಸಿನಲ್ಲಿ ನೀನು ಶಾಲೆಗೆ ಹೋಗುವುದು ಸರಿಯಪ್ಪ ಎಂದವನು ನನಗೆ ಪಾಟೀಚೀಲ, ಸ್ಲೇಟು ಬಳಪ ಎಲ್ಲಾ ತಂದು ಕೊಟ್ಟು ಹತ್ತಿರದ ಶಾಲೆಯೊಂದಕ್ಕೆ ಹೋಗಿ ಒಳಗೆ ಕೂರಿಸಿದ. ಅಲ್ಲಿಯ ಮಾಸ್ತರೊಂದಿಗೆ ಏನೇನು ಹೇಳಿದನೋ ಮಾಸ್ತರೂ ಟಿಸಿ ಪಾಸಿ ಏನೂ ಕೇಳಲಿಲ್ಲ. ಬಳಿಕ ನನ್ನ ಮನೆ ಪಾಠದ ಕೆಲಸಗಳೂ ಆಗುತ್ತಿದ್ದುದು ರಾಮಣ್ಣನ ಹೊಟೇಲಿನ ಮೇಜಿನ ಮೇಲೇ. ಆದರೆ ಆ ವರ್ಷ ಪೂರ್ಣ